ಓ ಎಸ್ಃ 41/2018

ಪಿ ಡಬ್ಲ್ಯೂ ಃ 1

ದಿನಾಂಕಃ 29.08.2025 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ**

ನನಗೆ ಪ್ರತಿವಾದಿಗಳ ಪರಿಚಯ ಇರುವುದಿಲ್ಲ. ವೆಂಕಟಚಲಯ್ಯ ನನ್ನ ಸ್ನೇಹಿತರು ಎಂದರೆ ಸರಿ. ಪ್ರತಿವಾದಿ 1 ರವರಿಗೆ ವೆಂಕಟಚಲಯ್ಯ ನವರು ಶಾಲೆಯ classmate ಎಂದರೆ ಗೊತ್ತಿಲ್ಲ. ವೆಂಕಟಚಲಯ್ಯ ನವರಿಗೆ ಪ್ರತಿವಾದಿ 1 ರವರ ಮನೆಯ ಎಲ್ಲಾ ವ್ಯವಹಾರಗಳು ಗೊತ್ತಿರುತ್ತವೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರವರಿಗೆ ಕಿಡ್ನಿ ಮತ್ತು ಲೀವರ್ ತೊಂದರೆ ಇತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರವರು ಆರೋಗ್ಯದ ಸಮಸ್ಯೆಯಲ್ಲಿದ್ದಾಗ ಚಿಕಿತ್ಸೆಗಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರಿಗೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅವರಿಗೆ ಶಸ್ತ್ರ ಚಿಕಿತ್ಸೆಯಲ್ಲಿ ಸುಮಾರು 25 ರಿಂದ 30 ಲಕ್ಷ ಖರ್ಚಾಗಿರುತ್ತದೆ ಎಂದರೆ ಗೊತ್ತಿಲ್ಲ.

ನಿ ಪಿ 1 ರಲ್ಲಿ 3 ತಿಂಗಳ ಒಳಗೆ ನಾನು ಹಣವನ್ನು ಕೊಟ್ಟು ಕ್ರಯವನ್ನು ಮಾಡಿಕೊಡುತ್ತೇನೆ ಎಂದು ಒಪ್ಪಂದ ಆಗಿತ್ತು ಎಂದರೆ ಸಾಕ್ಷಿ ಎಲ್ಲ ದಾಖಲಾತಿ ಆದ ಮೇಲೆ ಮಾಡಿಸಿಕೊಳ್ಳುತ್ತೇನೆ ಎಂದು ಒಪ್ಪಂದ ಆಗಿತ್ತು ಎಂದು ನುಡಿಯುತ್ತಾರೆ. ನಾನು ಸದರಿ 3 ತಿಂಗಳ ನಂತರ ನೋಂದಣಿ ಮಾಡಿಸಿರುವುದಿಲ್ಲ, ನಂತರ 6 ತಿಂಗಳಾದರೂ ನೋಂದಣಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಪೋಡಿ ಮತ್ತು 11 ಇ ಸ್ಕೆಚ್ ಆಗದೇ ಇರುವ ಕಾರಣ ನೋಂದಣಿ ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿ 1 ರವರು ಕ್ರಯದ ಕರಾರನ್ನು ರದ್ದು ಮಾಡಲು ನೋಟೀಸ್ ನೀಡಿದ್ದರು ಎಂದರೆ ಸರಿ. ನಾನು ಆ ಸಮಯದಲ್ಲಿ ಕೂಡ ನೊಂದಣಿ ಮಾಡಿಸಲು ನಾನು ತಯಾರಿದ್ದೆ. ರದ್ದತಿಗೆ ನನಗೆ ನೋಟೀಸ್ ತಲುಪಿದ 15 ದಿನದ ಒಳಗೆ ನಾನು ಪ್ರತಿ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ನೋಟೀಸ್ ಗೆ ಪ್ರತಿ ಉತ್ತರವನ್ನು ನೀಡಿರುತ್ತೇನೆ.

ಪ್ರತಿವಾದಿ 1 ರವರಿಗೆ ಬೇರೆ ವಿಧಿ ಇಲ್ಲದೇ ಆರೋಗ್ಯ ಚಿಕಿತ್ಸೆಗೆ ಬೇರೆಯವರ ಹತ್ತಿರ ಸಾಲ ಮಾಡಬೇಕಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರವರು ಆರೋಗ್ಯ ಸರಿ ಇಲ್ಲ, ಹಣದ ಅವಶ್ಯಕತೆ ಇದೆ ಎಂದು ಸಾಕಷ್ಟು ಬಾರಿ ನನ್ನ ಸ್ನೇಹಿತರಾದ ವೆಂಕಟಚಲಯ್ಯ ನವರ ಹತ್ತಿರ ಹೇಳಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರವರ ಆರೋಗ್ಯ ಸರಿ ಇರುವುದಿಲ್ಲ, ಅವರ ಆರೋಗ್ಯದ ಬಗ್ಗೆ ನನಗೆ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಎಂದರೆ ಸಾಕ್ಷಿ ನನಗೆ ಆರೋಗ್ಯದ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿ ಪಿ 39 ರ ಪ್ರಕಾರ ಪ್ರತಿವಾದಿ 1 ರವರಿಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಮನೆಯ ಕ್ರಯದ ಮುಂಗಡ ಕರಾರುಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಕ್ರಯದ ಕರಾರನ್ನು ಮಾಡಿರುತ್ತಾರೆ, ಆದರೆ ಅವರ ಆರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ ಎಂದು **ನುಡಿಯುತ್ತಾರೆ.**

ಪ್ರತಿವಾದಿ 1 ರವರು ವಿಧಿ ಇಲ್ಲದೇ ನನ್ನ ಜೊತೆ ವ್ಯವಹಾರ ಮಾಡಿ ತೊಂದರೆ ಅನುಭವಿಸಿದ ಕಾರಣ ಬೇರೆಯವರಿಗೆ ವಾಸದ ಮನೆಯ ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನಿಂದ ಯಾವುದೇ ತೊಂದರೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವ ವ್ಯವಹಾರ ನಿ ಪಿ 39 ಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**